ಏನಾದರು ಒಂದು ಸಪ್ಲಿಮೆಂಟರಿ ಬಿಲ್‌ನ್ನು ಈ ಸಭೆಯ ಮುಂದೆ ತರುವುದು ಇದ್ದರೆ, ಆ ಸಮಯ ಯದಲ್ಲಿಯೇ ಎಲಕ್ಟ್ರಿಸಿಟಿಯ ದರವನ್ನು ಹಾಸ್ತಿ ಮಾಡಿದ್ದರಿಂದ ಎಷ್ಟು ನಿವ್ವಳ ಆದಾಯ ಬರುತ್ತದೆ ಎಂಬುದನ್ನು ಸಭೆಗೆ ತಿಳಿಸಬೇಕು. ಮತ್ತು ಆ ಬಗ್ಗೆ ಚರ್ಚೆ ಮಾಡಲು ಸರ್ಕಾರದವರು ಅವಕಾಶ ಮಾಡಿಕೊಡಬೇಕು. ಆಪ್ರೊಪ್ರಿಯೇಷನ್ ಬಿಲ್ ಸಂಬಂಧದಲ್ಲಾದರು ಇದರ ಬಗ್ಗೆ ಒಂದು ಅವಕಾಶ ಕಲ್ಪನೆ ಮಾಡಿಕೊಡಬೇಕೆಂದು ಮತ್ತು ಇದಕ್ಕೆ ತಕ್ಕ ಏರ್ಪಾಡು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

†ಶ್ರೀ ಹೆಚ್. ಸಿದ್ದವೀರಪ್ಪ.—ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಕಾರ್ಪೋರೇಷನ್‌ಗಳ ವಿಚಾರ ಬಹಳ ಮುಖ್ಯವಾದವು. ಆರ್.ಟಿ.ಡಿ. ಕಾರ್ಪೊರೇಷನ್ ಇದೆ, ಎಲೆಕ್ಟ್ರಿಸಿಟಿ ಬೋರ್ಡ್ ಇದೆ ಭದ್ರಾವತಿ ಐರನ್ ಅಂಡ್ ಸ್ಟೀಲ್ ವರ್ಕ್ಸ್ ಮತ್ತು ಇನ್ನೂ ಅನೇಕ ಮುಖ್ಯ ಕಾರ್ಪೊರೇಷನ್‌ಗಳೂ ಇವೆ. ಇವುಗಳ ವಿಚಾರವಲ್ಲಿ ಒಂದೆರಡು ದಿವಸಗಳು ಬಿಟ್ಟೆಟ್ಟು ಪಾಸಾದ ನಂತರದಲ್ಲಾದರೂ ಇಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಒಂದೊಂದರಲ್ಲೂ ಸರಕಾರದವರು ಕೋಟಿಗಟ್ಟಲೆ ಹಣ ಎಂದರೆ ಸುಮಾರು 250–300 ಕೋಟಿಯವರೆಗೆ ಹಣ ಜೋಡಿಸಿದ್ದಾರೆ. ಮಾನ್ಯ ಹಣಕಾಸಿನ ಮಂತ್ರಿಗಳು ಇಲ್ಲಿಗೆ ಬಂದು ಒಂದು ಲಕ್ಷ ರೂಪಾಯಿ ಹಣ ಬೇಕೆಂದು ಇಲ್ಲಿ ಕಣ್ಣು ಕಣ್ಣು ಬಿಡುವ ಪರಿಸ್ಥಿತಿಯಲ್ಲಿದ್ದಾರೆ. ಇಂತಹ ಸಂಸ್ಥೆಗಳು ಹೇಗೆ ಕೆಲಸ ಮಾಡುತ್ತಿವೆ ಎನ್ನುವುದರ ಬಗ್ಗೆ ಎಲ್ಲ ಸದಸ್ಯರ ಗಮನವನ್ನು ಸೆಳೆದು ಇದರ ಬಗ್ಗೆ ವಿಚಾರ ಮಾಡಬೇಕಾದುದು ಅತ್ಯಗತ್ಯ. ಇದಕ್ಕಾಗಿ ನಾನು ಮಾನ್ಯ ಪಾರ್ಲಮೆಂಟರಿ ಮಂತ್ರಿಗಳನ್ನು ಕೇಳಿಕೊಳ್ಳುವುದು ಇದಕ್ಕೆ ಅವರು ಸಾಕಷ್ಟು ಟೈಂ ಮಾಡಿಕೊಡಬೇಕು ಮತ್ತು ಕಾಲವನ್ನೂ ಸರಿಯಾಗಿ ಒದಗಿಸಿ ಕೊಡಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಮಾನ್ಯ ಸದಸ್ಯರಾದ ಸಿದ್ದವೀರಪ್ಪನವರು ಹೇಳಿದಂತೆ ಇಂತಹ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಈ ಮಾನ್ಯ ಸಭೆಯಲ್ಲಿ ಅವಕಾಶಗಳನ್ನು ಮಾಡಿ ಕೊಡಲಾಗುತ್ತಿದೆ. ರೂಲ್ಸ್ ಕಮಿಟಿಯಲ್ಲೂ ಕೂಡ ಇದರ ವಿಚಾರ ಬಂದು ಒಂದು ಸಮಿತಿ ಗವರ್ನ್‌ಮೆಂಟ್ ಅಂಡರ್‌ಟೇಕಿಂಗ್ಸ್ ಬಗ್ಗೆ ಆಗಿದೆ. ಸಾರ್ವಜನಿಕರ ದುಡ್ಡನ್ನು ಹಾಕಿರುವ ಯಾವುದೇ ಸ್ವಯಮಾಡಳಿತ ಸಂಸ್ಥೆಯ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಅಗತ್ಯ ಮತ್ತು ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದಂತೆ ಸಾರ್ವಜನಿಕರಿಗೆ ಸಂಶಯ ಬಾರದಂತೆ ಇಂತಹ ಸಂಸ್ಥೆಗಳು ಕೆಲಸ ಮಾಡಬೇಕು ಮತ್ತು ಅವರು ಹೇಳಿದುದನ್ನು ನಾನು ಸಂಪೂರ್ಣವಾಗಿ ಅನುಮೋದನೆ ಮಾಡಿ ಸ್ವಾಗತಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಮಾನ್ಯ ಸದಸ್ಯರಾದ ನಂಜೇಗೌಡರು ಇಲ್ಲಿ ಕಳುಹಿಸಿದ ಪ್ರಿವಿಲೇಜು ಮೋಷನ್ ಬಗ್ಗೆ ಇಲ್ಲಿ ತಮ್ಮ ಗಮನಕ್ಕೆ ಕೆಲವು ವಿಚಾರ ತರಬೇಕಾಗಿದೆ.

ಅಧ್ಯಕ್ಷರು.—ಇದರಲ್ಲಿ ಹಕ್ಕುಬಾಧ್ಯತೆಗೆ ಮಾತ್ರ ಸಂಬಂಧ ಇರುವುದು. ಇದರ ಸಂಬಂಧವಾಗಿ ನಾನು ಅವರನ್ನೂ ಕೇಳಿದ್ದೇನೆ ಮತ್ತು ಮಾನ್ಯ ಸಚಿವರನ್ನೂ ಕೇಳಿದ್ದೇನೆ. ನನ್ನ ನಿರ್ಣಯವನ್ನು ಇನ್ನು ಒಂದೆರಡು ದಿವಸಗಳಲ್ಲಿ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಇಂದು ನಗರದಲ್ಲಿ ಪ್ರಮುಖವಾಗಿ ವಿದ್ಯುಚ್ಛಕ್ತಿ ದರವನ್ನು ಏರಿಸಿಬಿಟ್ಟಿದ್ದಾರೆ. ಇದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಇದನ್ನು ಸಭೆಯ ಗಮನಕ್ಕೆ ತಂದು ಇಲ್ಲಿ ಚರ್ಚೆ ಮಾಡಬೇಕಾಗಿದೆ.

ಅಧ್ಯಕ್ಷರು.—ಈಗ ಕಾಲಂಗು ಅಟೆನ್‌ಷನ್ ನೋಟೀನು ತೆಗೆದುಕೊಳ್ಳೋಣ.

Calling Attention Notice to matter of Urgent Public Importance

Re: Assault on a Communist and a trade Union Leader of Bangalore.

2-30 P. M.

Sri M. S. KRISHNAN (Malleswaram).—Sir, I call the attention of the Chief Minister to the assault on a communist and a trade union leader of Bangalore on 2-3-69. At 2-30 P.M. on 2-3-69 one Shri S. Suryanarayana

(SRI M. S. KRISHNAN)

Rao, Communist and Trade Union Leader of Bangalore, was assaulted by Peddappa Raju and other rowdy elements of Yadiyoor village when he was returning after visiting Subramanyapura workers colony. His vehicle was stopped and he was assaulted and his cloths were torn. He has preferred a complaint to Jayanagar Police Station at 3 p.m. on the same day.

The rowdy elements are indulging in these lawless activities for a long time in the area. In spite of complaints by the victims to the police, no action has been taken by the police to put an end to the activities of rowdy elements of the area.

†SRI VEERENDRA PATIL (Chief Minister).—Sir, it is reported that on 2-3-1969 at 3 PM a complaint was received at Jayanagar Police Station from Sri Suryanarayana Rao, stating that when he was returning home from Subr nanyapura at 2-30 p.m. he was stopped and assaulted by one Sri Peddappa Raju and a few others and that his shirt was torn etc. Immediately, a case in Jayanagar Police Station Crime No. 53/69 U/s 143, 341 and 323 I P C was registered by the Police against Sri Peddappa Raju and others.

On 3-3-1969 Shri Peddappa Raju and two others were arrested. They were produced on 4-3-1969 before the Second Magistrate, Bangalore who released them on bail. The case is under investigation. Efforts are being made to trace other accused persons in the case. Necessary bondobust arrangements are made to maintain law and order in the area. The allegation that the Police have not taken any action to put an end to the activities of the rowdy elements of the area in spite of complaints is not true.

ಶ್ರೀ ಎಂ. ಎಸ್. ಕೃಷ್ಣನ್.—ನ್ಯಾಯಿ, ಅಕ್ಯೂಸ್ಡ್ ಪರ್ಸನ್ಸ್ ಏನು ಇದ್ದಾರೆ ಅವರನ್ನೂ ಇದುವರೆಗೂ ಕಂಡುಹಿಡಿಯಲು ಆಗಲಿಲ್ಲ. ತಮಗೆ ಗೊತ್ತಿರುವ ಹಾಗೆ ಹಿಂದೆ ಅನೇಕ ಸಲ ಪೋಲೀಸ್ ಸ್ಟೇಷನ್‌ಗೆ ಕಂಪ್ಲೇಂಟ್ ಹೋಗಿದೆ. ಇಲ್ಲಿ ಟ್ರೇಡ್ ಯೂನಿಯನ್ ಲೀಡರ್ಸ್ ಏನು ಇದ್ದಾರೋ ಅವರನ್ನು ಕೃಷ್ಣಾ ಮಾಲೀಕರು ಗೂಂಡಾಗಳನ್ನು ಬಿಟ್ಟು ಅವರಿಂದ ಹೊಡೆಸುತ್ತಾರೆ. ಇದರ ಬಗ್ಗೆ ಬೇಕಾದಷ್ಟು ಕಂಪ್ಲೈಟ್ ಬಂದಿದ್ದರೂ ಕೂಡ ಇಲ್ಲಿಯವರೆಗೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇದರಿಂದ ಮಿರ್ ಮಾಲೀಕರಿಗೆ ನಪೋರ್ಟ್ ಮಾಡಿ ಕೊಟ್ಟ ಹಾಗಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಈಗ ನಾನು ಉತ್ತರ ಹೇಳಿದ್ದೇನೆ. 3 ಜನರನ್ನು ಅರೆಸ್ಟ್ ಮಾಡಿದ್ದಾರೆ. ಮ್ಯಾಜಿಸ್ಟ್ರೇಟ್ ಮುಂದೆ ಪ್ರೊಡ್ಯೂಸ್ ಮಾಡಿದ್ದಾರೆ. ಅದರಲ್ಲಿ ಒಬ್ಬನನ್ನು ಬೇಲ್ ಮೇಲೆ ಬಿಟ್ಟಿದ್ದಾರೆ. ಇನ್ನೂ ಕೆಲವರು ಸಿಕ್ಕಬೇಕಾಗಿದೆ. ಕೇಸ್ ರಿಜಿಸ್ಟ್ರ್ ಆಗಿದೆ. ಇಷ್ಟು ಆದಮೇಲೂ ಪೋಲೀಸರು ಏನೂ ಕೆಲಸ ಮಾಡುತ್ತಾ ಇಲ್ಲ, ಈ ಇರಾಖೆ ಏನು ಕ್ರಮವನ್ನೂ ತೆಗೆದು ಕೊಳ್ಳುತ್ತಾ ಇಲ್ಲ ಎಂದು ಹೇಳಿದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಅನುಭವದ ಮೇರೆ ಹೇಳುತ್ತೇನೆ. ಅಲ್ಲಿ ಪೋಲೀಸ್ ಸ್ಟೇಷನ್ ಮಿರ್‌ಗೆ ದೂರವಾಗಿದೆ. ಟ್ರೇಡ್ ಯೂನಿಯನ್‌ನವರು ಕೆಲಸ ಮಾಡಿ ಹೊರಗಡೆ ಬರ ಬೇಕಾಗುತ್ತದೆ. ಪೋಲೀಸ್ ಸ್ಟೇಷನ್‌ಗೆ ಬಹಳ ದೂರ ಇರುವುದರಿಂದ ತಕ್ಷಣ ಪೋಲೀಸಿನವರು ಬರುವುದಿಲ್ಲ. ಅಲ್ಲ ಮಾಲೀಕರು ಟ್ರೇಡ್ ಯೂನಿಯನ್‌ನವರು ಇರಕೂಡದು ಎಂದು ಗೂಂಡಾ ಗಳನ್ನು ಬಿಟ್ಟು ಅವರ ಮುಖಂಡರನ್ನು ಹೊಡೆಸುತ್ತಿದ್ದಾರೆ. ಮಿರ್‌ನ ಹತ್ತಿರ ಹೋದರೆ ಅಲ್ಲನ ಪರಿಸ್ಥಿತಿಯೇ ಬೇರೆಯಾಗಿರುತ್ತೆ. ಅದುದರಿಂದ ಇದಕ್ಕೆ ಸರಿಯಾದ ಬಂದೋಬಸ್ತನ್ನು ಮಾಡು ತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನನಗೆ ಗೊತ್ತಿದ್ದ ಹಾಗೆ ಎರಡು ಯೂನಿಯನ್‌ನಲ್ಲೂ ಜಗಳ ಇದೆ. ಒಂದೊಂದು ಯೂನಿಯನ್‌ನಲ್ಲಿ ಅವರವರಲ್ಲೆ ಜಗಳ ಇರುತ್ತದೆ. ಪ್ರತಿದಿನವೂ ಜಗಳ ಕಾಯುತ್ತಾ ಇರುತ್ತಾರೆ. ಎಷ್ಟು ಸಾಧ್ಯವಾಗುತ್ತದೋ ಅಷ್ಟು ಮಟ್ಟಿಗೆ ಪ್ರಿಕಾಷನ್ಸ್ ತೆಗೆದು ಕೊಳ್ಳುತ್ತೇವೆ. ಯಾರೇ ತಪ್ಪು ಮಾಡಲ ತಪ್ಪಿತಸ್ಥರಿಗೆ ಕಾನೂನು ಪ್ರಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿರುವ ಯೂನಿಯನ್ನಲ್ಲೆ ರೈವಲ್ರಿ ಇದೆ ಎಂದು ಹೇಳಿದಿರಿ. ಯಾವ ಯೂನಿಯನ್‌ನವರೇ ಆಗಲಿ, ಯಾರೇ ಆಗಲಿ ಈ ರೀತಿ ದೊಂಡಾವರ್ತನೆ ಮಾಡುತ್ತಿದ್ದರೆ ತಕ್ಷಣ ಪೋಲೀಸಿನವರು ಕ್ರಮ ತೆಗೆದುಕೊಳ್ಳಬೇಕು. ಅದು ಬಿಟ್ಟು ಎರ್ಲಾ ಅವ ಮೇಲೆ ಪೋಲೀಸ್ ಬಂದೋಬಸ್ತು ಮಾಡುತ್ತೀರಿ. ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಎರ್ಲಾ ಮುಗಿದ ಮೇಲೆ ಪೋಲೀಸರಿಗೆ ತಿಳಿಸುತ್ತೀರಿ. ಮೊದಲೇ ತಿಳಿಸಿದರೆ ತಕ್ಕ ಬಂದೋಬಸ್ತು ಮಾಡಬಹುದು.

(ii) *Re*: Suspending payment of Salaries to all the Secondary School Teachers of the North Kanara District

Sri M. M. JALISATGI (Bhatkal).—Sir, I beg to call the attention of the Minister for Education to the passing of an order by the D.E-O. of North Kanara, suspending payment of salaries to all Secondary School Teachers of North Kanara District.

Sri K. V. SHANKARA GOWDA.—It has also been alleged that the District Educational officer, North Kanara has passed orders suspending the payment of the salary of all secondary school Teachers of North Kanara District for the months of February and March without assigning any reason. However, I learn that the District Educational Officer has not passed any such orders. The pay bills for the month of January payable in February were delayed by a few days due to shortage of funds. After the additional funds were placed at the disposal of the District Educational Officer by the Director of Public Instruction, payment of salaries were made to all the teachers in February. There was no difficulty regarding payment of the salaries for the month of February payable in March. The District Educational Officer has informed the Director of Public Instruction by telephone that all the bills have been passed and the teachers have been paid.

†ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ನಿಜವಾದ ಪರಿಸ್ಥಿತಿ ಏನಾಗಿದೆ ಎಂದರೆ ಹೊಸದಾಗಿ ಮಾಡಿರತಕ್ಕ ನಿಯಮದ ಪ್ರಕಾರ ಗಾಂಧಿ ಶತಾಬ್ದಿ ವರ್ಷದಲ್ಲಿ 125 ಪ್ರೌಢಶಾಲೆಗಳನ್ನು ಮುಚ್ಚುವಂತೆ ಮಾಡಿದ್ದಾರೆ, ಆದರಲ್ಲಿಯೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಜನಸಾಂದ್ರತೆ ಕಡಮೆಯಾಗಿರುವುದರಿಂದ ಪ್ರತಿ ತರಗತಿಯಲ್ಲಿಯೂ 25 ಜನ ವಿದ್ಯಾರ್ಥಿಗಳಿರುವುದಕ್ಕಾಗುವುದಿಲ್ಲ. ಬೊಂಬಾಯಿ ಎಜ್ಯುಕೇಷನ್ ಆಕ್ಟ್ ಪ್ರಕಾರ 15 ಜನ ವಿದ್ಯಾರ್ಥಿಗಳಿದ್ದರೆ ವಿದ್ಯಾಭ್ಯಾಸಕ್ಕೆ ಅನುಕೂಲವಿತ್ತು. ಆದರೆ 25 ವಿದ್ಯಾರ್ಥಿಗಳಿಗಿಂತ ಕಡಮೆ ಜನರಿದ್ದಾರೆಂಬ ಕಾರಣದಿಂದ ಆ ಶಾಲೆಗಳಿಗೆ ಕೊಡುವ ಗ್ರಾಂಟನ್ನು ನಿಲ್ಲಿಸಿದ್ದಾರೆ. ಉಪಾಧ್ಯಾಯರಿಗೆ ನೋಟೀಸ್ ಕೊಟ್ಟು ಏಪ್ರಿಲ್ 10 ನೇ ತಾರೀಖು ಅವರನ್ನು ತೆಗೆಯಬೇಕು ಎಂದು ತಿಳಿಸಿದ್ದಾರೆ. ಅಲ್ಲಿರುವ ವಿದ್ಯಾರ್ಥಿಗಳಿಗೆ ಟಿ. ಸಿ ಕೊಟ್ಟು ಕಳಿಸಬೇಕೆಂದು ಸುತ್ತೋಲೆ ಹೋಗಿದೆ. ಉಪಾಧ್ಯಾಯರು ಗಳಿಗೆ ಸಂಬಳ ಬಂದಿಲ್ಲವೆಂದು ನಮಗೆ ತೆಲಿಗ್ರಾಂ ಬಂದಿದೆ. ಮಾನ್ಯ ಮಂತ್ರಿಗಳು ಓದಿದ್ದು ಯಾವ ವರದಿಯೋ ಗೊತ್ತಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಜನಸಾಂದ್ರತೆ ಕಡಿಮೆ ಇರುವುದರಿಂದ